C.R.P.67

Form No.4
(Criminal)
Deposition
Sheets
(R.P.No.57)

# 5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ

## ಸ್ಪೆಷಲ್ ಕೇಸ್ ನಂಬರ್‌: 256/2019

**ಚಾ.ಸಾ.–05 ಪ್ರಾ.ಸಾ.–05**

| | |
|---|---|
| **ಸಾಕ್ಷಿದಾರರ ಹೆಸರು** | **ರತ್ನಮ್ಮ** |
| **ಗಂಡನ ಹೆಸರು** | **ಮಹದೇವು** |
| **ವಯಸ್ಸು** | **58 ವರ್ಷಗಳು** |
| **ಉದ್ಯೋಗ** | **ಮನೆ ಕೆಲಸ** |
| **ವಾಸ** | **ಗಾಂಧಿನಗರ, ಮಂಡ್ಯ ಸಿಟಿ** |

**ದಿನಾಂಕ: 22.12.2025 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ಚಾಸಾ-1 ನನ್ನ ಅಣ್ಣ. ಚಾಸಾ- 2 ಮತ್ತು 3 ನನ್ನ ಅಣ್ಣನ ಮಕ್ಕಳು ಚಾಸಾ-4 ನನ್ನ ಅತ್ತಿಗೆ. ಚಾಸಾ- 6 ನನ್ನ ಅತ್ತಿಗೇನಟ ಅಕ್ಕ. ಚಾಸಾ- 7 ನನ್ನ ಅತ್ತಿಗೆಯ ತಾಯಿ. ನಾವು ಪರಿಶಿಷ್ಟ ಜಾತಿಗೆ ಸೇರಿದವರು. ಚಾಸಾ- 10, 11 ರವರ ಪರಿಚಯ ನನಗೆ ಇದೆ.

2. ಈ ದಿನ ನ್ಯಾಯಾಲಯದ ಮುಂದಿರುವ 1, 3 ರಿಂದ 12 ನೇ ಆರೋಪಿತರ ಪರಿಚಯ ನನಗೆ ಇದೆ. (Witness identified accused Nos. 1 and 3 to 12 in the dock). 2ನೇ ಆರೋಪಿಯ ಪರಿಚಯ ಕೂಡ ನನಗೆ ಇದೆ. (learned Counsel for Accused submits that there is no identity dispute with respect to accused No.2). 4 ಮತ್ತು 11 ನೇ ಆರೋಪಿತರು ಅವರು ಪರಿಶಿಷ್ಟ ಪಂಗಡಕ್ಕೆ ಸೇರಿದವರು. 7ನೇ ಆರೋಪಿ ವಿಶ್ವಕರ್ಮ ಜಾತಿಗೆ ಸೇರಿದವರು. ಉಳಿದವರು ಒಕ್ಕಲಿಗ ಜಾತಿಗೆ ಸೇರಿದವರು.

3. ನಾವು ಮಂಡ್ಯದ ಗಾಂಧಿನಗರ, 6ನೇ ಕ್ರಾಸ್‌ನಲ್ಲಿ ವಾಸವಿದ್ದೇವೆ. ನಾವು ವಾಸವಿದ್ದ ಜಾಗದಲ್ಲಿ ಒಂದುಶೆಡ್ಡು ಇದ್ದು ಶೆಡ್ಡಿನ ಮುಂಬಾಗದಲ್ಲಿ ನಾನು, ನನ್ನ ತಾಯಿ ತಂದೆ ನನ್ನ

ಅಕ್ಕ ತಂಗಿಯರು ಅಲ್ಲಿ ವಾಸವಿದ್ದು ಸದರಿ ಶೆಡ್ಡಿನ ಹಿಂಭಾಗ ಚಾಸಾ- 1 ಮತ್ತು ಅವರ ಹೆಂಡತಿ ಮಕ್ಕಳು ವಾಸವಿದ್ದರು. ನಮಗೆ ಜಾಗ ಇಲ್ಲ ಮನೆ ಕಟ್ಟಿ ಕೊಡಿ ಎಂದು ನನ್ನ ಅಣ್ಣ ಸರ್ಕಾರಕ್ಕೆ ಅರ್ಜಿ ನೀಡಿದ್ದರು. ಸರ್ಕಾರದಿಂದ ನಮ್ಮ ಅಣ್ಣನಿಗೆ ಮನೆ ಕಟ್ಟಲು ಮಂಜೂರಾಗಿದೆ ಎಂದು ಹೇಳಿದರು. ಜಾಗದಲ್ಲಿರುವ ಶೆಡ್ಡು ಕಿತ್ತು ಹಾಕಿ ಸ್ಥಳವನ್ನು ಅಚ್ಚುಕಟ್ಟು ಮಾಡಿಕೊಡಬೇಕೇಂದು ಸರ್ಕಾರದಿಂದ ಹೇಳಿದರು. ಆದಕಾರಣ ನಾನು ವಾಸವಿದ್ದ ಶೆಡ್ಡನ್ನು ನಾವು ಕಿತ್ತು ಹಾಕಿದೆವು ಸ್ಥಳವನ್ನ ಅಚ್ಚುಕಟ್ಟು ಮಾಡಿದೆವು. ಆ ಸಮಯ ಚಾಸಾ- 1 ರವರು ವಾಸವಿದ್ದ ಶೆಡ್ಡಿನಲ್ಲಿ ನಾವು ವಾಸವಿದ್ದೆವು. ಸದರಿ ಸ್ಥಳದಲ್ಲಿ ನಮ್ಮ ಕುಟುಂಬದವರು ಕಳೆದ 70 – 80 ವರ್ಷಗಳಿಂದ ವಾಸವಿದ್ದೇವೆ. 1ನೇ ಆರೋಪಿ ಗುಂಪು ಕಟ್ಟಿಕೊಂಡು ಸದರಿ ಜಾಗ ಅವರದು ಎಂದು ಬಂದರು. ಸ್ಥಳದಲ್ಲಿ ಮನೆ ಕಟ್ಟಬಾರದೆಂದು ಹೇಳಿದರು. ಕೊಳಚೆ ನಿರ್ಮೂಲನ ಮಂಡಳಿಯವರು ಮನೆಯನ್ನು ಕಟ್ಟುಕೊಟ್ಟಿರಲಿಲ್ಲ. ಸರ್ಕಾರದಿಂದ ಮಂಜೂರಾಗಿ ಚಾಸಾ-1 ರವರು ಮನೆಯನ್ನು ಕಟ್ಟುತ್ತಿದ್ದರು. ಹೀಗ್ಗೆ ಸುಮಾರು ಆರುವರೆ ವರ್ಷದ ಹಿಂದೆ ಮನೆ ಕಟ್ಟುತ್ತಿದ್ದಾಗ ಆರೋಪಿತರು ಸದರಿ ಜಾಗ ಅವರದು ಎಂದು ಮನೆಯನ್ನು ಕೆಡವಲು ಬಂದರು. ಆರೋಪಿತರು ನಮ್ಮ ಮೇಲೆ ದೂರನ್ನು ಕೊಟ್ಟು ನಮ್ಮನ್ನು ಠಾಣೆಗೆ ಕಳುಹಿಸಿ ನಾವು ಠಾಣೆಗೆ ಹೋದೆವು. ನಾವು ಠಾಣೆಯಲ್ಲಿ ಇದ್ದಾಗ ಆರೋಪಿತರು ನಾವು ಕಟ್ಟುತ್ತಿದ್ದ ಮನೆಯನ್ನು ಬೀಳಿಸಿದರು. ಮನೆಯನ್ನು ಕಟ್ಟುತ್ತಿದ್ದ ಮೇಸ್ತ್ರಿ ಚಾಸಾ- 2 ರವರಿಗೆ ಪೋನ್ ಮಾಡಿ ಹೇಳಿದರು. ನಾವು ಅಲ್ಲಿಂದ ಸ್ಥಳಕ್ಕೆ ಬಂದೆವು. ನಮ್ಮನ್ನು ಒಳಗೆ ಬಿಡಲಿಲ್ಲ. ಆರೆ ಗುದ್ದಲಿಯಿಂದ ಮನೆಯನ್ನು ಉರುಳಿಸಿದರು. ವಾಸ್ತು ಕಲ್ಲನ್ನು ಕೆಡವಿದರು. 6 ಅಡಿ ಗೋಡೆಯನ್ನು ಉರುಳಿಸಿದರು. ಆರೋಪಿತರು ನಮ್ಮ ಮೇಲೆ ಹಲ್ಲೆ ಮಾಡಿದರು. ನನಗೆ, ಚಾಸಾ- 1, 2, 3, 4, 6 ಮತ್ತು 7 ರವರ ಮೇಲೆ ಹಲ್ಲೆ ಮಾಡಿದರು. ನನ್ನನ್ನು ಕೆಳಗೆ ಬೀಳಿಸಿ ತುಳಿದರು. ನಮಗೆ ಪೆಟ್ಟಾದ ಕಾರಣ ಮಂಡ್ಯ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡೆವು. ನಂತರ ನನ್ನ ಅಣ್ಣನ ಮಗಳು ದೂರನ್ನು ಕೊಟ್ಟಳು. ಈ ಮೇಲೆ ಹೇಳಿದ ವಿಚಾರಗಳನ್ನು ಪೋಲೀಸರಿಗೆ ಹೇಳಿಕೆ ನೀಡುವಾಗ ಹೇಳಿರುತ್ತೇನೆ.

**4.** ಈ ಹಿಂದೆ ನಾನು ಮಂಡ್ಯದ ನ್ಯಾಯಾಲಯಕ್ಕೆ ಹೋಗಿ ಹೇಳಿಕೆ ನೀಡಿರುತ್ತೇನೆ ಸದರಿ ಹೇಳಿಕೆಯನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ-12** ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-12ಎ** ಎಂದು ಗುರುತಿಸಲಾಗಿದೆ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಹೆಚ್.ಡಿ.ಆರ್ ವಕೀಲರಿಂದ</u>**

**5.** ನಾವು ವಾಸವಿದ್ದ ಶೆಡ್ಡು ಇರುವ ಜಾಗ ನಮ್ಮದು ಎಂದು ತೋರಿಸಲು ನಮ್ಮ ಬಳಿ ದಾಖಲೆ ಇದೆ. ಸದರಿ ಜಾಗವನ್ನು ನಮ್ಮ ಕುಟುಂಬದವರು ಯಾರ ಬಳಿಯಿಂದ ಖರೀದಿ ಮಾಡಿರುವುದಿಲ್ಲ. ಕೊಳಚೆ ನಿರ್ಮೂಲನ ಮಂಡಳಿಯವರು ಮನೆ ಇಲ್ಲದವರಿಗೆ, ಜಾಗ ಇಲ್ಲದವರಿಗೆ ಮನೆ ಕಟ್ಟಿಕೊಡುತ್ತೇವೆ ಎಂದು ಹೇಳಿದ್ದರು. ನಾವು ಕೂಡಾ ನಮಗೆ ಮನೆ ಇಲ್ಲ ಎಂದು ಅರ್ಜಿ ನೀಡಿದ್ದೆವು. ತಾತ್ಕಲಿಕವಾಗಿ ಶೆಡ್ಡು ಹಾಕಿಕೊಂಡು ಇರಬೇಕು ಎಂದು ಅರ್ಜಿ ನೀಡಿದವರಿಗೆಲ್ಲರಿಗೂ ಸರ್ಕಾರದವರು ಹೇಳಿದ್ದರು. ಆದಕಾರಣ ಸದರಿ ಜಾಗದಲ್ಲಿ ತಾತ್ಕಾಲಿಕವಾಗಿ ಶೆಡ್ಡು ಕಟ್ಟಿಕೊಂಡು ಇದ್ದೆವು ಎಂದರೆ ಸರಿಯಲ್ಲ. ನಾನು ವಾಸವಿದ್ದ ಜಾಗ ಅವರದು ಎಂದು 1ನೇ ಆರೋಪಿ ಬಂದು ನಮ್ಮಲ್ಲಿ ಕೇಳಿದ್ದರು ಎಂದರೆ ಸರಿಯಲ್ಲ. ನಾವು ಸದರಿ ಜಾಗವನ್ನು ಬಿಟ್ಟುಕೊಟ್ಟಿರಲಿಲ್ಲ. ಜಾಗ ಬಿಟ್ಟುಕೊಡದೆ ಇದ್ದ ಕಾರಣ ಈ ಸಂಬಂದ ಮಂಡ್ಯ ಪಶ್ಚಿಮ ಪೋಲೀಸ್ ಠಾಣೆಗೆ 1ನೇ ಆರೋಪಿ ದೂರನ್ನು ಕೊಟ್ಟಿರುತ್ತಾರೆ. ಆದಕಾರಣ ನಾನು ಮತ್ತು ನಮ್ಮ ಕುಟುಂಬದವರೆಲ್ಲರೂ ಪೋಲೀಸ್ ಠಾಣೆಗೆ ಹೋಗಿದ್ದೆವು. ಪೋಲೀಸರು ನಮ್ಮ ಬಳಿ ಇರುವ ದಾಖಲೆಗಳನ್ನು ಕೇಳಿದ್ದರು ಎಂದರೆ ಸರಿಯಲ್ಲ. ಸದರಿ ಸ್ಥಳ 1ನೇ ಆರೋಪಿಗೆ ಸಂಬಂದಪಟ್ಟಿದ್ದು ಎಂದು ದಾಖಲೆಗಳನ್ನು ತೋರಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ಸಮಯ ಪೋಲೀಸರು ಸದರಿ ಸ್ಥಳ 1ನೇ ಆರೋಪಿಗೆ ಸೇರಿದ್ದು ಅದನ್ನು ಅವರಗೆ ಬಿಟ್ಟುಕೊಡಿ ಎಂದು ತಿಳುವಳಿಕೆ ಹೇಳಿದ್ದರು ಎಂದರೆ ಸರಿಯಲ್ಲ. ಹೊಸದಾಗಿ ಮನೆಯನ್ನು ಕಟ್ಟುತ್ತಿರುವಾಗ 1ನೇ ಆರೋಪಿ ಬಂದು ಸದರಿ ಸ್ಥಳ ಅವರದು ಎಂದು ಕೇಳಿದರು. ಆ ಸಮಯ ನಾನು ಮತ್ತು ನಮ್ಮಕುಟುಂಬದವರು ಸೇರಿ 1ನೇ ಆರೋಪಿಗೆ ಸದರಿ ಸ್ಥಳ ನಮ್ಮದು ಎಂದು ದಮ್ಕಿ ಹಾಕಿದೆವು ಎಂದರೆ ಸರಿಯಲ್ಲ. ಈ ಸಂಬಂದ 1ನೇ ಆರೋಪಿ ನಮ್ಮ ವಿರುದ್ಧ ಪೋಲೀಸ್ ಠಾಣೆಯಲ್ಲಿ ದೂರನ್ನು ನೀಡಿದರು ಎಂದರೆ ಸರಿ. 1ನೇ ಆರೋಪಿ ನಮ್ಮ ವಿರುದ್ಧ ದೂರು ಕೊಟ್ಟಿರುವ ವಿಷಯ ನಾವು ಗಲಾಟೆ ನಡೆದಿದೆ ಎನ್ನುವ ದಿನ ಠಾಣೆಗೆ ಹೋಗುವ ಪೂರ್ವದಲ್ಲಿ

ಗೊತ್ತಾಗಿರುತ್ತದೆ. ಅವರು ದೂರು ಕೊಟ್ಟ ನಂತರ ನಾವು ಅವರ ವಿರುದ್ಧ ದೂರು ಕೊಟ್ಟಿರುತ್ತೇವೆ. ನಾವು ಗಲಾಟೆ ಎನ್ನುವ ದಿವಸ ಬೆಳಿಗ್ಗೆ ಠಾಣೆಗೆ ಹೋದಾಗ ಆರೋಪಿತರು ಠಾಣೆಯಲ್ಲಿ ಇದ್ದರು. ಅವರು ದೂರು ಕೊಟ್ಟ ನಂತರ ಪ್ರತಿ ದೂರನ್ನು ಸುಳ್ಳಾಗಿ ಆರೋಪಿತರ ವಿರುದ್ಧ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾವು ಕಟ್ಟುತ್ತಿದ್ದ ಮನೆಯನ್ನು ಆರೋಪಿತರು ಒಡೆದುಹಾಕಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೋಲೀಸರ ಮುಂದೆಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮನೆಯಲ್ಲಿ ಇದ್ದಾಗ ಆರೋಪಿತರು ಬಂದು ಯಾವುದೇ ಹಲ್ಲೆ ಮಾಡಿಲ್ಲ ಯಾವುದೇ ಜಾತಿ ನಿಂದನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಕೃತ್ಯ ನಡೆದ ಸ್ಥಳ ನಮಗೆ ಸೇರಿರುತ್ತದೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ಪೋಲೀಸರ ಮುಂದೆ ಇಲ್ಲಿಯವರೆಗೂ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾದೀಶರ ಮುಂದೆ ಪೋಲೀಸರು ಹೇಳಿಕೊಟ್ಟಂತೆ ಹೇಳಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರವರಿಂದಃ** ಇಲ್ಲ ಎಂದು ನುಡಿಯುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಮಂಜುಳಾ ಇಟ್ಟಿ)**
**5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ**
**ನ್ಯಾಯಾಲಯ, ಮಂಡ್ಯ**